# **ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಾರವಾರ**

## **ಅಧಿಸೂಚನೆ ಸಂಖ್ಯೆ 1/2023**

ದಿನಾಂಕಃ **17/08/2023**

ಆಡಳಿತ ಸಹಾಯಕ/ಬೆರಳಚ್ಚುಗಾರ ಮತ್ತು ದಲಾಯತ್ ಹುದ್ದೆಗೆ ಗುತ್ತಿಗೆ ಮತ್ತು ಸಂಪೂರ್ಣವಾಗಿ ತಾತ್ಕಾಲಿಕ ಆಧಾರದ ಮೇಲೆ, ಆರು ತಿಂಗಳ ಅವಧಿಗೆ, ಕ್ರಮವಾಗಿ ತಿಂಗಳಿಗೆ ರೂ.17,658/- ಮತ್ತು ರೂ.15,202/- ಸಂಭಾವನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ . ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಃ 15/09/2023 ರ ಸಾಯಂಕಾಲ 6.00 ಗಂಟೆ.

**ಹುದ್ದೆಗಳ ವಿವರಃ**

| ಅ. ನಂ. | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ವಿದ್ಯಾರ್ಹತೆ | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಸಂದರ್ಶನದ ದಿನಾಂಕ ಮತ್ತು ಸಮಯ | ಸಂಭಾವನೆ |
|---|---|---|---|---|---|---|
| 1. | ಆಡಳಿತ ಸಹಾಯಕ / ಬೆರಳಚ್ಚುಗಾರ | 1 | ಯಾವುದೇ ಪದವಿ ಹಾಗೂ ಹಿರಿಯ ಶ್ರೇಣಿ ಕನ್ನಡ ಮತ್ತು ಇಂಗ್ಲೀಷ ಬೆರಳಚ್ಚು ಉತ್ತೀರ್ಣ | 15/09/2023 | 24/09/2023 ಬೆಳಿಗ್ಗೆ 10.00 ಗಂಟೆ | ರೂ. 17,658/- |
| 2. | ದಲಾಯತ್ | 1 | ಕನಿಷ್ಠಃ ಎಸ್.ಎಸ್.ಎಲ್.ಸಿ.<br>ಗರಿಷ್ಠಃ ದ್ವಿತೀಯ ಪಿ.ಯು.ಸಿ. | 15/09/2023 | 24/09/2023 ಬೆಳಿಗ್ಗೆ 11.00 ಗಂಟೆ | ರೂ. 15,202/- |

**ಸಂದರ್ಶನಕ್ಕೆ ಪ್ರತ್ಯೇಕವಾಗಿ ನೋಟೀಸು ಅಥವಾ ಪತ್ರವನ್ನು ಕಳುಹಿಸಲಾಗುವದಿಲ್ಲ.**

ಸಂಪೂರ್ಣ ಬಯೋ-ಡೇಟಾ, ಮೊಬೈಲ್ ಸಂಖ್ಯೆ ಮತ್ತು ಮಾರ್ಕ್ಸ್ ಕಾರ್ಡ್‌ನ ಹಾಗೂ ಇತರೆ ದಾಖಲಾತಿಗಳ ದೃಢೀಕೃತ ಪ್ರತಿಗಳೊಂದಿಗೆ ಎರಡು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಅವುಗಳಲ್ಲಿ ಒಂದನ್ನು ಅರ್ಜಿಯ ಮೇಲ್ಭಾಗದಲ್ಲಿ ಅಂಟಿಸಬೇಕು, ಈ ರೀತಿ ವಿವರವಾಗಿ ಭರ್ತಿ ಮಾಡಿದ ಅರ್ಜಿಗಳು ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ಈ ಕಚೇರಿಯನ್ನು ತಲುಪಬೇಕು.

**ಟಿಪ್ಪಣಿಃ**

1. ಮೇಲೆ ಹೇಳಲಾದ ಆಡಳಿತ ಸಹಾಯಕ/ಬೆರಳಚ್ಚುಗಾರ ಮತ್ತು ದಲಾಯತ್ ಹುದ್ದೆಯ ನೇಮಕಾತಿಯನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಸಂಪೂರ್ಣವಾಗಿ ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶಗಳವರೆಗೆ ಯಾವುದು ಮೊದಲಿನದು ಅಲ್ಲಿಯವರೆಗೆ ನೇಮಕಾತಿ ಊರ್ಜಿತದಲ್ಲಿರುತ್ತದೆ.

2. ದಿನಾಂಕಃ 31/08/2023 ರಂದು ಅಭ್ಯರ್ಥಿಗಳ ವಯಸ್ಸು 18 ವರ್ಷಕ್ಕಿಂತ ಕಡಿಮೆಯಿರಬಾರದು ಮತ್ತು 35 ವರ್ಷಕ್ಕಿಂತ ಹೆಚ್ಚಿರಬಾರದು. ಕಾಲಕಾಲಕ್ಕೆ ಸ್ವೀಕರಿಸಲಾಗುವ ಸರ್ಕಾರದ ಸೂಚನೆಗಳ ಪ್ರಕಾರ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುತ್ತದೆ.

3. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಟಿಎ/ ಡಿಎ ಪಾವತಿಸಲಾಗುವುದಿಲ್ಲ.

4. ಸಂದರ್ಶನದ ದಿನಾಂಕವನ್ನು ರದ್ದುಗೊಳಿಸಿದರೆ /ಮುಂದೂಡಿದರೆ, ಅದರ ಸೂಚನೆಯನ್ನು ಈ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗುತ್ತದೆ.

5. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು, ದಿನಾಂಕಃ 24/09/2023 ರಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರವಾರ ಕಚೇರಿಯಲ್ಲಿ ಹಾಜರಿರತಕ್ಕದ್ದು.

6. ಅರ್ಜಿ ಸಲ್ಲಿಸಲು ವಿಳಾಸ–

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಜಿಲ್ಲಾ ನ್ಯಾಯಾಲಯ ಸಂಕೀರ್ಣ,
ಎಂ.ಜಿ.ರಸ್ತೆ, ಕಾರವಾರ–581301.

17/8/2023

(ರೇಣುಕಾ ರಾಯ್ಕರ್)
ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಉ.ಕ., ಕಾರವಾರ.

ಸಂಖ್ಯೆ: ಡಿಎಲ್ಎಸ್ಎ/382/2023, ದಿನಾಂಕಃ 17.08.2023

1. ನ್ಯಾಯಾಲಯದ ಸೂಚನಾ ಫಲಕ
2. ಜಿಲ್ಲಾಧಿಕಾರಿಗಳ ಕಛೇರಿ, ಕಾರವಾರ
3. ಕೆ.ಎಸ್.ಆರ್.ಟಿ.ಸಿ. ಬಸ್ಸ ನಿಲ್ದಾಣ, ಕಾರವಾರ
4. ನಗರಸಭೆ, ಕಾರವಾರ
5. ಜಿಲ್ಲಾ ಪಂಚಾಯತ, ಕಾರವಾರ
6. ವಕೀಲರ ಸಂಘ ಕಾರವಾರ
7. ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆ
8. ಕಛೇರಿ ಪ್ರತಿ

O/C.

17/8/2023